ವಿಶ್ರಾಂತಿ ಎಂದರೆ? ಊರಿನ ಯಾರೋ ಬಂಧುಗಳ ಮನೆಯಲ್ಲಿ ಉಂಡು ತೇಗಿ ಚಾವಡಿಯಲ್ಲಿ ದಿಂಬಿಗೊರಗಿ ಗೊರಕೆ ಹೊಡೆಯುವುದು ಎಂದಲ್ಲ.



# ಮೌನಗೊಂಡಿತು ಗಗ್ಗರ

■ ಉದ್ಯಾವರ ಮಾಧವ ಆಚಾರ್ಯ

ಶಂಕರ ಕುಂಬಾಳ್ಕರ್ ಸ್ವಗ್ರಾಮಕ್ಕೆ ಬರುವ ವರ್ತಮಾನ ತಿಳಿದುಬಂದರೆ ಸಾಕು ಊರಿಗೆ ಊರೇ ತೋರಣವಾಗುತ್ತಿತ್ತು. ಮದುಮಗಳಂತೆ ಸಿಂಗಾರಗೊಳ್ಳುತ್ತಿತ್ತು. ಊರಿನ ಎಲ್ಲರೂ ಹಬ್ಬವನ್ನಾಚರಿಸುವಂತೆ ಸಂಭ್ರಮಗೊಳ್ಳುತ್ತಿದ್ದರು.

ಹೆಚ್ಚಾಗಿ ಬೇಸಗೆಯ ದಿನಗಳಲ್ಲಿ ಹುಟ್ಟೂರಿಗೆ ಬರುವ ಶಂಕರ ಕುಂಬಾಳ್ಕರ್ ಆ ಸಂಭ್ರಮವನ್ನು ತಾನೂ ಬಯಸುತ್ತಿದ್ದರು. ಈ ನಲವತ್ತು ಐವತ್ತು ವರ್ಷಗಳಲ್ಲಿ ಊರಿಗೆ ಬರುವ ಅವಕಾಶವನ್ನು ಒಮ್ಮೆಯೂ ಅವರು ತಪ್ಪಿಸಿಕೊಂಡದ್ದಿಲ್ಲ.

ಕೆಲವೊಮ್ಮೆ ವಿಶೇಷ ಸಂದರ್ಭಗಳಲ್ಲಿ ಎರಡು ಮೂರು ಬಾರಿ ಬರಬೇಕಾದಾಗ ಸಂತೋಷಪಡುತ್ತಿದ್ದರೇ ವಿನಹ ಅಸಹನೆ ತಾಳುತ್ತಿರಲಿಲ್ಲ. ಊರಿಗೆ ಬರುವುದೆಂದರೆ ತನ್ನ ಬಿಡುವಿಲ್ಲದ ವಹಿವಾಟಿನ ಒತ್ತಡದಿಂದ ಒಂದಷ್ಟು ಕಾಲ ಬಿಡುಗಡೆ ಎಂದೇ ತಿಳಿಯುತ್ತಿದ್ದರು. ನಿರಾಳನೆಮ್ಮದಿಯ ಆನಂದವನ್ನು ಮನಸಾರೆ ಅನುಭವಿಸುತ್ತಿದ್ದರು ಶಂಕರ ಕುಂಬಾಳ್ಕರ್.

ಈ ಬಿಡುಗಡೆ ಕೇವಲ ವ್ಯಾಪಾರದ ಒತ್ತಡದಿಂದ ಮಾತ್ರವಲ್ಲ. ಒಟ್ಟಾರೆ ಬದುಕಿನ ಎಲ್ಲ ಬಿಗಿ ಬಂಧಗಳಿಂದ. ಹುಟ್ಟಿದೂರಿನ ಮಣ್ಣಿನ ಮೇಲೆ ಕಾಲಿಟ್ಟ ಕ್ಷಣದಿಂದ ಅವರ ಹೆಸರಿನ ಕೃತಕತೆಯಿಂದ ತೊಡಗಿ ಅವರ ವೇಷಭೂಷಣ ಇತ್ಯಾದಿಗಳಲ್ಲೆಲ್ಲ ಪರಿವರ್ತನೆಯ ಹೊಸ ಗಾಳಿ ಬೀಸಿದಂತಾಗಿ ಪ್ರತಿಬಾರಿಯೂ ಪುಳಕಿತರಾಗುತ್ತಿದ್ದರು.